aglasem.com

FOR KARNATAKA CLASS 10 PREPARATION

Karnataka SSLC Model Question Paper 2027 for Kannada Second Language (Paper 2) Key Answers

EXAM	YEAR	TYPE	SUBJECT
Karnataka Class 10	2027	Answer Key	Kannada

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಮಲ್ಲೇಶ್ವರಂ, ಬೆಂಗಳೂರು – 560003

KARNATAKA SCHOOL EXAMINATION AND ASSESSMENT BOARD

Malleshwaram Bengaluru-560003

ಮಾದರಿ ಉತ್ತರಗಳು–ಪತ್ರಿಕೆ–02

MODEL ANSWERS - PAPER-02

ವಿಷಯ : ದ್ವಿತೀಯ ಭಾಷೆ ಕನ್ನಡ

SUBJECT : Second Language Kannada

ಸಮಯ : 3 ಗಂಟೆ | **ವಿಷಯ ಸಂಕೇತ : 33K**

ಗರಿಷ್ಠ ಅಂಕಗಳು : 80 | **Subject Code : 33K**

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
I	**ಬಹುಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**	4x1=4
1.	1. 'ಸ್ವರದ ಸಹಾಯದಿಂದ ಉಚ್ಚರಿಸಲ್ಪಡುವ ಅಕ್ಷರಗಳನ್ನು ಹೀಗೆ ಕರೆಯುತ್ತಾರೆ' – ಎ) ಸ್ವರಗಳು ಬಿ) ಯೋಗವಾಹಗಳು ಸಿ) ಅನುನಾಸಿಕಗಳು ಡಿ) ವ್ಯಂಜನಗಳು **ಉತ್ತರ : ಡಿ) ವ್ಯಂಜನಗಳು**	
2.	2. 'ಆತ್ಮಾರ್ಥಕ ಸರ್ವನಾಮ' ಪದವಿದು – ಎ) ಯಾರು? ಬಿ) ನಾನು ಸಿ) ತಾನು ಡಿ) ಮೂಡಣ **ಉತ್ತರ : ಸಿ) ತಾನು**	
3.	3. 'ವ' ಎಂಬುದು ಈ ಕಾಲವನ್ನು ಸೂಚಿಸುವ ಪ್ರತ್ಯಯವಾಗಿದೆ. – ಎ) ವರ್ತಮಾನಕಾಲ ಬಿ) ಭವಿಷ್ಯತ್‌ಕಾಲ ಸಿ) ಭೂತಕಾಲ ಡಿ) ಸಕಾಲ **ಉತ್ತರ : ಬಿ) ಭವಿಷ್ಯತ್‌ಕಾಲ**	
4.	4. 'ಆದ್ದರಿಂದ' ಪದವು ಈ ಅವ್ಯಯದ ಪದವಿದು– ಎ) ಸಂಬಂಧಾರ್ಥಕ ಅವ್ಯಯ ಬಿ) ಸಾಮಾನ್ಯ ಅವ್ಯಯ ಸಿ) ಕ್ರಿಯಾರ್ಥಕ ಅವ್ಯಯ ಡಿ) ಕೃದಂತ ಅವ್ಯಯ **ಉತ್ತರ : ಎ) ಸಂಬಂಧಾರ್ಥಕ ಅವ್ಯಯ**	
II	**ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ವಾಕ್ಯ ರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)**	12x1=12
5.	**5. 'ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ' ಪ್ರಕಾರ ಸಾಹಿತಿಗಳು ಕೃತಘ್ನರಾಗುವುದು ಯಾವಾಗ?** **ಉತ್ತರ :** ಸಾಹಿತಿಗಳು ಕೃಷಿಕರಿಗೆ ಬೇಕಾದ ಸತ್ವವನ್ನು ಸಾಹಿತ್ಯದ ಮೂಲಕ ತುಂಬುವ ಕಾರ್ಯವನ್ನು ಮಾಡದಿದ್ದರೆ ಅವರು ಕೃತಘ್ನರಾಗುತ್ತಾರೆ.	
6.	**6. ಪುಟ್ಟರಾಜರು ಸ್ವದೇಶಿ ಆಂದೋಲನಕ್ಕೆ ಕೈ ಜೋಡಿಸುವ ಸಲುವಾಗಿ ಯಾವ ಪ್ರತಿಜ್ಞೆ ಮಾಡಿದರು?** **ಉತ್ತರ :** ಪುಟ್ಟರಾಜರು ಸ್ವದೇಶಿ ಆಂದೋಲನಕ್ಕೆ ಕೈ ಜೋಡಿಸುವ ಸಲುವಾಗಿ ಖಾದಿ ಬಟ್ಟೆಯನ್ನು ತೊಡುವ ಪ್ರತಿಜ್ಞೆ ಮಾಡಿದರು.	
7.	**7. ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವುವು?** ಉತ್ತರ : ಹಕ್ಕಿಯ ದೇಹಸ್ವರೂಪ, ಪರಿಸರದ ವೈಲಕ್ಷಣಗಳು, ಬಲಿ–ಬೇಟೆ ಸಂಬಂಧಗಳು ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುತ್ತವೆ.	

8.	**8. ಗಂಗೆಯಲ್ಲಿ ತೇಲುತ್ತಿದ್ದ ನೂರಾರು ದೀಪಗಳು ಹೇಗೆ ಕಾಣುತ್ತಿದ್ದವು?** ಉತ್ತರ ಃ ಗಂಗೆಯಲ್ಲಿ ತೇಲುತ್ತಿದ್ದ ನೂರಾರು ದೀಪಗಳು ನದಿಯ ಬಟ್ಟೆಗೆ ಬೆಳಕಿನ ಕಸೂತಿ ಹಾಕಿದಂತೆ ಕಾಣುತ್ತಿದ್ದವು.	
9.	**9. ಗೋಪಾಲನಿಗೆ ಬಣ್ಣ ಬಣ್ಣದ ಹೂವುಗಳು ಹೇಗೆ ಕಾಣುತ್ತಿದ್ದವು?** ಉತ್ತರ ಃ ಗೋಪಾಲನಿಗೆ ಬಣ್ಣ ಬಣ್ಣದ ಹೂವುಗಳು ಸಾವಿರಾರು ಮಳೆ ಬಿಲ್ಲು ಸೇರಿ ಕುಣಿದಂತೆ ಕಾಣುತ್ತಿದ್ದವು.	
10.	**10. ಹಾ. ಮಾ. ನಾಯಕರ ಪ್ರಕಾರ ರೋಗಿಗಳು ಯಾರ ಬಳಿ ಹೋಗುತ್ತಾರೆ?** **ಉತ್ತರ ಃ** ಹಾ. ಮಾ. ನಾಯಕರ ಪ್ರಕಾರ ರೋಗಿಗಳು ವೈದ್ಯರ ಬಳಿ ಹೋಗುತ್ತಾರೆ.	
11.	**11. ಯುಗಾದಿಯಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ?** **ಉತ್ತರ ಃ** ಯುಗಾದಿಯಲ್ಲಿ ಬೇವು–ಬೆಲ್ಲವನ್ನು ಹಂಚುವ ಸಂಪ್ರದಾಯವಿದೆ	
12.	**12. ತಿಮಿರದ ವೈರಿ ಯಾವುದು?** **ಉತ್ತರ ಃ** ತಿಮಿರದ ವೈರಿ ದೀಪ (ಬೆಳಕು).	
13.	**13. ಜನಪದರು ತುಂಬಿದ ಕುಣಿಗಲ್ ಕೆರೆಯನ್ನು ಯಾವುದಕ್ಕೆ ಹೋಲಿಸಿದ್ದಾರೆ?** **ಉತ್ತರ ಃ** ಜನಪದರು ತುಂಬಿದ ಕುಣಿಗಲ್ ಕೆರೆಯನ್ನು ನಿಂಬೆಹಣ್ಣಿಗೆ ಹೋಲಿಸಿದ್ದಾರೆ.	
14.	**14. ಬಸವಣ್ಣನವರ ಪ್ರಕಾರ ನಶಿಸುವುದು ಯಾವುದು?** ಉತ್ತರ ಃ ಬಸವಣ್ಣನವರ ಪ್ರಕಾರ ನಶಿಸುವುದು ಸ್ಥಾವರ.	
15.	**15. ವೇಷ ಮತ್ತು ಆಚರಣೆಗಳ ನಡುವಿನ ಸಂಬಂಧ ಹೇಗಿರಬೇಕೆಂದು ಸಿದ್ಧರಾಮ ಹೇಳುತ್ತಾರೆ?** **ಉತ್ತರ ಃ** ವೇಷ ಮತ್ತು ಆಚರಣೆಗಳ ನಡುವಿನ ಸಂಬಂಧ ಒಂದೇ ಆಗಿರಬೇಕೆಂದು ಸಿದ್ಧರಾಮ ಹೇಳುತ್ತಾರೆ.	
16.	**16. ಅರ್ಜುನ ಯಾರನ್ನು ನಾಡನರಿ ಎಂದು ಕರೆದಿದ್ದಾನೆ?** **ಉತ್ತರ ಃ** ಅರ್ಜುನ ಉತ್ತರಕುಮಾರನನ್ನು ನಾಡನರಿ ಎಂದು ಕರೆದಿದ್ದಾನೆ.	
III	**ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು.** **(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು)**	8x2=16
17.	**17. ರೈತರು ಎದುರಿಸುತ್ತಿರುವ ಸಮಸ್ಯೆಗಳಾವುವು?** ಉತ್ತರ ಃ ಉತ್ತಮ ಬೀಜಗಳ ಕೊರತೆ, ಭೂಮಿ ಬರಡಾಗುತ್ತಿರುವುದು ಕ್ರಿಮಿ–ಕೀಟಗಳ ಹಾವಳಿ, ಬೆಳೆಗೆ ವಿವಿಧ ರೀತಿಯ ರೋಗಗಳು, ಮಳೆಯ ಅಭಾವ, ಅತಿವೃಷ್ಟಿ ಇವಲ್ಲದೆ ತಾನು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ಇರುವುದು ಇವೆಲ್ಲವೂ ರೈತರು ಎದುರಿಸುತ್ತಿರುವ ಸಮಸ್ಯೆಗಳಾಗಿವೆ.	

18. **18. ಹಕ್ಕಿಗಳು ಬದಲಾದ ಪರಿಸರಕ್ಕೆ ಹೊಂದಿಕೊಂಡು ಗೂಡು ಕಟ್ಟುವುದಕ್ಕೆ ಲೇಖಕರು ಯಾವ ಉದಾಹರಣೆಗಳನ್ನು ನೀಡುತ್ತಾರೆ?**

ಉತ್ತರ ಃ

ಹಕ್ಕಿಗಳು ಬದಲಾದ ಪರಿಸರಕ್ಕೆ ಸಮರ್ಥವಾಗಿ ಹೊಂದುಕೊಂಡು ಮನುಷ್ಯರಿರುವ ಕೇರಿಗಳಲ್ಲಿ, ವಾಹನ ಸಂಚಾರ ಹೆಚ್ಚಿರುವ ಸ್ಥಳಗಳಲ್ಲಿ, ಟ್ರಾನ್ಸ್‌ಫಾರ್ಮರ್ ಬಳಿ, ಮೀಟರ್ ಪೆಟ್ಟಿಗೆಯಲ್ಲಿ ಅಷ್ಟೇ ಏಕೆ? ವಿದ್ಯುತ್‌ತಂತಿಗಳ ಮೇಲೂ, ಹೊಸ ಪರಿಸರಕ್ಕೆ ಹೊಂದಿಕೊಂಡು ಗೂಡು ಕಟ್ಟುತ್ತವೆ ಎಂದು ಲೇಖಕರು ಹೇಳಿದ್ದಾರೆ.

19. **19. ಹರಿದ್ವಾರಕ್ಕೆ ಕಪಿಲಸ್ಥಾನ ಎಂದು ಹೆಸರು ಬರಲು ಕಾರಣವೇನು?**

ಉತ್ತರ ಃ

ಸಗರ ಪುತ್ರರನ್ನು ಕಪಿಲ ಮಹರ್ಷಿಯು ತನ್ನ ಕೋಪಾಗ್ನಿಯಿಂದ ಬೂದಿ ಮಾಡುತ್ತಾರೆ. ನಂತರ ಸಗರ ವಂಶದ ಭಗೀರಥನು ತನ್ನ ಪಿತೃಗಳಿಗೆ ಸದ್ಗತಿಯನ್ನು ಕಾಣಿಸಲು ಗಂಗೆಯನ್ನು ತಂದು ಹರಿಸಿದ ಸ್ಥಳವಾದ್ದರಿಂದ ಹರಿದ್ವಾರಕ್ಕೆ ಕಪಲಸ್ಥಾನ ಎಂಬ ಹೆಸರು ಬರಲು ಕಾರಣವಾಯಿತು.

20. **20. ಸೌಜನ್ಯಶೀಲರ ಲಕ್ಷಣಗಳಾವುವು?**

ಉತ್ತರ ಃ

ಹಾ,ಮಾ, ನಾಯಕರು ಹೇಳುವಂತೆ ಬಳಿಗೆ ಬಂದವರು ಏನು ಹೇಳುತ್ತಾರೆ ಎಂಬುದನ್ನು ತಾಳ್ಮೆಯಿಂದ ಕೇಳಬೇಕು. ಆಗುತ್ತದೋ ಇಲ್ಲವೋ ಎಂಬುದನ್ನು ಹೇಳುವಾಗ ಮಾತಿನಲ್ಲಿ ಮೃದುತನ ಇರಬೇಕು. ಒಂದು ನಗು ಬಳಿಗೆ ಬಂದವರಿಗೆ ತೃಪ್ತಿ ನೀಡುತ್ತದೆ. ಹೇಳುವ ಸತ್ಯವನ್ನು ಪ್ರಿಯವಾಗಿ ಹೇಳಬೇಕು. ಸಹಾನುಭೂತಿ, ಸಹೃದಯತೆ, ಸಮಾಧಾನಗಳು ಸೌಜ್ಯನ್ಯಶೀಲರ ಲಕ್ಷಣಗಳಾಗಿವೆ.

21. **21. ಬಾಳೆಮೀನು ಬೊಬ್ಬೆ ಹೊಡೆಯಲು ಕಾರಣವೇನು?**

ಉತ್ತರ ಃ

ಕುಣಿಗಲ್ ಕೆರೆಯು ಅಲ್ಲಿಯ ಜನರ ಉಪ ಕಸುಬಾದ ಮೀನುಗಾರಿಕೆ ಆಶ್ರಯತಾಣವಾಗಿದೆ. ಜನರು ಮೀನುಗಳನ್ನು ಹಿಡಿಯಲು ಕೆರೆಯಲ್ಲಿ ಬಲೆಗಳನ್ನು ಹಾಕುತ್ತಾರೆ. ಬಲೆಗಳನ್ನು ನೀರಿನಿಂದ ಮೇಲಕ್ಕೆ ಎತ್ತಿದಾಗ ಬಲೆಯಲ್ಲಿ ಸಿಕ್ಕಿಕೊಂಡ ಮೀನುಗಳು ನೆಗೆದಾಡುತ್ತವೆ. ಇದನ್ನು ಜನಪದರು ಬೊಬ್ಬೆ ಹೊಡೆದಾವೆ ಬಾಳೆಮೀನು ಎಂದು ವರ್ಣಿಸಿದ್ದಾರೆ.

22. **22. ಲೋಕದಲ್ಲಿ ಕೇಳಿಬರುವ ಸ್ತುತಿ ನಿಂದೆಗಳನ್ನು ಅಕ್ಕಮಹಾದೇವಿಯು ಯಾವುದಕ್ಕೆ ಹೋಲಿಸಿದ್ದಾರೆ?**

ಉತ್ತರ ಃ

ಅಕ್ಕಮಹಾದೇವಿಯು ಲೋಕದಲ್ಲಿ ಕೇಳಿಬರುವ ಸ್ತುತಿ ನಿಂದೆಗಳನ್ನು 'ಬೆಟ್ಟದ ಮೇಲಿನ ಮೃಗಗಳಿಗೆ', 'ಸಮುದ್ರದ ನೆರೆ–ತೊರೆಗಳಿಗೆ' ಹಾಗೂ 'ಸಂತೆಯೊಳಗಿನ ಶಬ್ದಕ್ಕೆ' ಹೋಲಿಸಿದ್ದಾರೆ. ಜೀವನದಲ್ಲಿ ಸ್ತುತಿ ನಿಂದೆಗಳು ಬಂದಾಗ ಅಂಜದೆ, ಅಳುಕದೆ, ದೃತಿಗೆಡದೆ ಸಮಾದಾನಿಯಾಗಿರಬೇಕೆಂದು ಹೇಳಿದ್ದಾರೆ.

23. **23. ಶಿಷ್ಯನು 'ಪದ್ಮಪಾದಾಚಾರ್ಯ'ನೆಂದು ಹೇಗೆ ವಿಖ್ಯಾತನಾದನು ಎಂಬುದನ್ನು ವಿವರಿಸಿ?**

ಉತ್ತರ ಃ

ಆ ಒಂದು ಕಾಳರಾತ್ರಿಯಲ್ಲಿ ಶಿಷ್ಯನು ಗುರುದರ್ಶನಕ್ಕಾಗಿ ತಲ್ಲಣಿಸಿ ಬರುವಾಗ, ಗುರು ಹೊಳೆಯ ಆಚೆಗೆ ಮರದಡಿಯಲ್ಲಿ ಕುಳಿತಿದ್ದನು. ಆಗ ಭಕ್ತಿ ಪರವಶನಾದ ಶಿಷ್ಯನು ಗುರುವಿದ್ದೆಡೆಗೆ ನೀರಿನಲ್ಲಿಯೇ ನಡೆದು ಹೋಗಲು ಹೊರಟ. ಅವನ ಶ್ರದ್ಧೆ ಅಷ್ಟು ಶ್ರೇಷ್ಠ. ಅವನು ಹೆಜ್ಜೆ ಇಟ್ಟಲ್ಲಿ, ಇಡುವಲ್ಲಿ ಕೆಳಗೊಂದು ಬಲಿಷ್ಠ ತಾವರೆ ಅರಳಿ ನಿಂತಿತಂತೆ. ಆ ತಾವರೆಗಳ ಮೇಲೆ ಹೆಜ್ಜೆಯಿಡುತ್ತಾ ಆತ ಗುರು ಚರಣ ಕಮಲದಲ್ಲಿ ಮಿಲಿಂದಾಯ ಮಾನವಾಗಲು ಬಂದು ಸೇರಿದ. ಆದ್ದರಿಂದ 'ಶಂಕರ ದಿಗ್ವಿಜಯ'ದಲ್ಲಿ ಆತ ಪದ್ಮಪಾದಾಚಾರ್ಯನೆಂದು ವಿಖ್ಯಾತನಾದ.

24. ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕಿದೆ?

ಉತ್ತರ ಃ

ಕವಯತ್ರಿ ತಿಳಿಸಿದಂತೆ ಮನುಕುಲದ ಭವ್ಯ ಬದುಕು ಇಂಧನದಿಂದ ಅರಳಬೇಕಿದೆ. ತೆಂಗನ್ನು ಬೆಳೆಯುತ್ತಾ ಅದರಿಂದ ತೈಲಧಾರೆ ಹೊಮ್ಮಿ ಬರಬೇಕು. ಹೊಂಗೆ, ಹಿಪ್ಪೆಗಳ ಜೀವಮೇಳ ನಡೆದು ಅದರಿಂದಲೂ ತೈಲಧಾರೆ ಹೊಮ್ಮಿ ಬರಬೇಕು. ಮುಗಿದು ಹೋಗುತ್ತಿರುವ ತೈಲ ಸಂಪತ್ತು ಜೈವಿಕ ಇಂಧನದ ಮೂಲಕ ತುಂಬಬೇಕು. ಜೈವಿಕ ಇಂಧನ ಪಳೆಯುಳಿಕೆ ಇಂಧನಕ್ಕೆ ಪರ್ಯಾಯವಾಗಿ ಬರುವ ಮೂಲಕ ಮನುಕುಲವನ್ನು ಬೆಳಗಿ ಮನುಕುಲದ ಭವ್ಯ ಬದುಕು ಅರಳಬೇಕಿದೆ.

IV	**ಕವಿ / ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು:** **ಜನ್ಮಸ್ಥಳ, ಕಾಲ** **ಕೃತಿಗಳು, ಪ್ರಶಸ್ತಿಗಳು** **ವಾಕ್ಯ ರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ** **ಒಟ್ಟು** **25. 'ಕುವೆಂಪು'** ಕನ್ನಡದ ವರ್ಡ್ಸ್‌ವರ್ತ್ ಹಾಗೂ ರಾಷ್ಟ್ರಕವಿ ಎಂದು ಖ್ಯಾತರಾಗಿರುವ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು 29–12–1904 ರಂದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕು ಕುಪ್ಪಳಿಯಲ್ಲಿ ಜನಿಸಿದರು. ಇವರ ತಂದೆ ವೆಂಕಟಪ್ಪಗೌಡ, ತಾಯಿ ಸೀತಮ್ಮ. ಇವರ ಕಾವ್ಯನಾಮ ಕುವೆಂಪು. ಚಂದ್ರಮಂಚಕೆ ಬಾ ಚಕೋರಿ, ನವಿಲು, ಪಕ್ಷಿಕಾಶಿ, ಬೆರಳ್‌ಗೆ ಕೊರಳ್, ಶೂದ್ರತಪಸ್ವಿ, ಜಲಗಾರ, ರಸೋವೈಸಃ, ವಿಭೂತಿ ಪೂಜೆ, ದ್ರೌಪದಿಯ ಸಿರಿಮುಡಿ, ನನ್ನ ದೇವರು ಮತ್ತು ಇತರ ಕತೆಗಳು, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಶ್ರೀರಾಮಾಯಣ ದರ್ಶನಂ–ಮೊದಲಾದ 80ಕ್ಕೂ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಪದ್ಮಭೂಷಣ ಪ್ರಶಸ್ತಿ, ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಪಂಪ ಹಾಗೂ ಕರ್ನಾಟಕ ರತ್ನ ಪ್ರಶಸ್ತಿಗಳು ದೊರೆತಿವೆ.	3x1=3 1 ಅಂಕ 1 ಅಂಕ 1 ಅಂಕ 3 ಅಂಕಗಳು
V **26.**	**ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯುವುದು:** **ಪತ್ಯಾಂಶಕ್ಕೆ** **ಪದ ಬಳಕೆ ಮತ್ತು ಶೈಲಿ** **ಒಟ್ಟು** **26.** ಮೈಕೊಡವಿ ಎದ್ದ ಜಗ ಖಗ ಪಕ್ಷಿ ಪ್ರಾಣಿಗಳು ಲಗುಬಗೆಯ ದಗದಕ್ಕೆ ಹೊರಟಂತಿದೆ ಹೊಸತು ಜೀವೋಲ್ಲಾಸ ಚಿಗಿತ ಭಾವವಿಲಾಸ ನೆಲಮುಗಿಲ ವಾಲಗವೆ ನಡೆದಂತಿದೆ. ಈ ಪದ್ಯಭಾಗವನ್ನು 'ಬಸವರಾಜ ಸಾದರ' ಅವರ 'ಸಿಸಿಫಸರ ಸುತ್ತು' ಕವನ ಸಂಕಲದ 'ಸವಿಚೈತ್ರ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ. ಯುಗದ ಆದಿಯಲ್ಲಿ ನೆಲದಮ್ಮ ನವವಧುವಿನಂತೆ ಸಿಂಗಾರಗೊಂಡಿರುತ್ತಾಳೆ. ಎಲ್ಲಾ ಜೀವಿಗಳಲ್ಲೂ ಹೊಸ ಚೈತನ್ಯ, ಹೊಸ ಉಲ್ಲಾಸ ಒಡಮೂಡಿರುತ್ತದೆ. ಅದನ್ನು ಕವಿ ಜಡತ್ವವನ್ನು ತೊಡೆದು ಹೊಸ ಹುರುಪಿನಿಂದ ತಮ್ಮ ತಮ್ಮ ಕಾರ್ಯದಲ್ಲಿ ತೊಡಗಿವೆ ಎಂದು ಹೇಳಿದ್ದಾರೆ. ಹೊಸ ಹೊಸ ಭಾವನೆಗಳನ್ನು ಹೊಂದಿ ಉತ್ಸಾಹ ಭರಿತವಾಗಿ ಜಗದ ಕಾರ್ಯ ನಡೆದಿದೆ. ಖಗ, ಪಕ್ಷಿ, ಪ್ರಾಣಿಗಳ ಕಲರವದ ವಾಲಗ ಭೂಮಿಯಿಂದ ಆಕಾಶಕ್ಕೆ ತಲುಪಿದಂತೆ ಭಾಸವಾಗುತ್ತಿದೆ ಎಂದು ಯುಗಾದಿಯ ಸಂದರ್ಭವನ್ನು ಕವಿ ಸೊಗಸಾಗಿ ವರ್ಣಿಸಿದ್ದಾರೆ.	3x1=3 1 ಅಂಕ 2 ಅಂಕ 3 ಅಂಕಗಳು
VI 27.	**ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು:** ಅಲಂಕಾರವನ್ನು ಹೆಸರಿಸುವುದು ಲಕ್ಷಣ ಮತ್ತು ಸಮನ್ವಯಗೊಳಿಸುವುದು ಒಟ್ಟು **27. 'ಸೀತೆಯ ಮುಖಕಮಲ ಅರಳಿತು'** ಅಲಂಕಾರ ಃ ರೂಪಕಾಲಂಕಾರ ಲಕ್ಷಣ ಃ ಅತಿ ಸಾಮ್ಯದಿಂದ ಉಪಮೇಯ ಉಪಮಾನಗಳಲ್ಲಿ ಅಭೇದವನ್ನು ಹೇಳಿ ವರ್ಣಿಸಿದಾಗ ಅದು ರೂಪಕಾಲಂಕಾರವಾಗುತ್ತದೆ ಉಪವೇಯ ಃ ಸೀತೆಯ ಮುಖ ಉಪಮಾನ ಃ ಕಮಲ ಸಮನ್ವಯ ಃ ಉಪಮೇಯವಾದ 'ಸೀತೆಯ ಮುಖ'ವನ್ನು ಉಪಮಾನವಾದ 'ಕಮಲ'ಕ್ಕೆ ಅಭೇದವಾಗಿ ರೂಪಿಸಿರುವುದರಿಂದ ಇದು ರೂಪಕಾಲಂಕಾರವಾಗಿದೆ.	3x1=3 1 ಅಂಕ 2 ಅಂಕ 3 ಅಂಕಗಳು

VII	**ಗಾದೆಯನ್ನು ವಿಸ್ತರಿಸಿ ಬರೆಯುವುದು: (ಯಾವುದಾದರೂ ಒಂದಕ್ಕೆ ಮಾತ್ರ)** ಗಾದೆಯ ಮಹತ್ವದ ವಿವರಣೆ ಉದಾಹರಣೆಯೊಂದಿಗೆ ಅರ್ಥ ವಿವರಣೆ ಭಾಷಾ ಶೈಲಿಗೆ–ಪದಬಂಧಗಳಿಗೆ ಒಟ್ಟು	3x1=3 1 ಅಂಕ 1 ಅಂಕ 1 ಅಂಕ 3 ಅಂಕಗಳು
28.	**28. ಮನಸ್ಸಿದ್ದರೆ ಮಾರ್ಗ** **ಅಥವಾ** **ತುಂಬಿದ ಕೊಡ ತುಳುಕುವುದಿಲ್ಲ**	

VIII	**ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು:** ಕೃತಿ, ಕರ್ತೃ ಮತ್ತು ಪಠ್ಯದ ಹೆಸರು ಯಾರು–ಯಾರಿಗೆ ಸಂದರ್ಭ ಭಾಷಾ ಶೈಲಿ, ಪದಬಂಧಗಳಿಗೆ ಒಟ್ಟು	5x3=15 1 ಅಂಕ 1 ಅಂಕ 1 ಅಂಕ 3 ಅಂಕಗಳು
29.	**29. "ನೆರಳು ಕೊಡುವ ವರವನ್ನು ದಯಪಾಲಿಸು."** **ಉತ್ತರ :** ಈ ವಾಕ್ಯವನ್ನು ಅ.ರಾ, ಮಿತ್ರ ಅವರು ಬರೆದಿರುವ ಮಹಾಭಾರತಪಾತ್ರ– ಸಂಗತಿಗಳು ಕೃತಿಯಿಂದ ಆಯ್ದ ಒಣ ಮರದ ಗಿಳಿ ಎಂಬ ಪಾಠದಿಂದ ಆರಿಸಿದೆ. ಈ ಮಾತನ್ನು ಗಿಳಿ ಇಂದ್ರನಿಗೆ ಹೇಳಿದ ಮಾತು ಗಿಳಿಯ ತತ್ವನಿಷ್ಠೆಯನ್ನು ಮೆಚ್ಚಿಕೊಂಡ ಇಂದ್ರನು ಗಿಳಿಗೆ ಏನಾದರೂ ವರವನ್ನು ಕೊಡುತ್ತೇನೆ ಕೇಳು ಎನ್ನುತ್ತಾನೆ. ಆಗ ಗಿಳಿಯು "ದೇವರಾಜ ವರವನ್ನು ಕೊಡುವ ಇಚ್ಛೆ ಇದ್ದರೆ ಆ ಮರಕ್ಕೆ ಮೊದಲಿನಂತೆ ಹಸಿರಿನಿಂದ ನಳನಳಿಸುವ, ಫಲಪುಷ್ಪಭಾರದಿಂದ ಬೀಗುವ, ನೆರಳು ಕೊಡುವ ವರವನ್ನು ದಯಪಾಲಿಸು! ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ" ಎಂದು ಹೇಳುತ್ತದೆ. ಇಲ್ಲಿ ಗಿಳಿಯ ತತ್ವನಿಷ್ಠೆ ಹಾಗೂ ಪರಹಿತಕಾಂಕ್ಷಿಯ ಗುಣವು ಸ್ವಾರಸ್ಯಕರವಾಗಿ ಅಭಿವ್ಯಕ್ತಗೊಂಡಿದೆ.	
30.	**30. "ನಿನ್ನಂಥ ಶ್ರೇಷ್ಠ ಪುತ್ರರತ್ನವೊಂದನ್ನು ಹೆತ್ತ ಭಾಗ್ಯ ನನ್ನದಾಗಲಿ."** **ಉತ್ತರ :** ಈ ವಾಕ್ಯವನ್ನು ರಮೇಶಗೌಡ ಎಂ.ಕೆ. ಅವರು ಬರೆದಿರುವ 'ಗಾನಯೋಗಿ ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳು' ಎಂಬ ಜೀವನ ಚರಿತ್ರೆಯಿಂದ ಆಯ್ದ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ. ಈ ಮಾತನ್ನು ಪುಟ್ಟಯ್ಯನು ತನ್ನ ತಾಯಿ ಸಿದ್ಧಮ್ಮನವರಿಗೆ ಹೇಳುತ್ತಾನೆ. ಸಿದ್ಧಮ್ಮ ತಾಯಿ ಪಂಚಾಕ್ಷರ ಗವಾಯಿಗಳ ಅಪ್ಪಣೆ ಪಡೆದು ಪುಟ್ಟರಾಜರನ್ನು ಮನೆಗೆ ಬರುವಂತೆ ಕೇಳಿಕೊಂಡಳು. ಆದರೆ ಪುಟ್ಟಯ್ಯನ ಮನಸ್ಸು ದೃಢವಾಗಿತ್ತು. "ನನಗೆ ನನ್ನ ಸರ್ವಸ್ವವೂ ಗುರುಗಳು. ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ. ಸಮಾಜದ ಋಣವನ್ನು ತೀರಿಸದೆ ಅದು ಹೇಗೆ ನಿನ್ನ ಜೊತೆ ಬರಲಿ ತಾಯಿ, ಭವದಲ್ಲಿನ ಎಲ್ಲ ಬಂಧಗಳನ್ನು ತೊಡೆದು ಹಾಕಿರುವೆ. ಗುರು ಪಂಚಾಕ್ಷರರೇ ನನ್ನ ಸರ್ವಸ್ವ, ನನ್ನ ಮಗನೆಂಬ ಭಾವವನ್ನು ತೊಡೆದು ಹಾಕಿ ನನ್ನನ್ನು ಸಮಾಜಕ್ಕರ್ಪಿಸು ತಾಯಿ" ಎಂದರು. ಆಗ ತಾಯಿ ಹೆಂಡತಿ, ಮಕ್ಕಳು ಸಂಸಾರದ ಬಂಧನ ನಿನಗಿಷ್ಟವಿಲ್ಲದಿದ್ದರೆ ನನ್ನ ಜೊತೆ ಬರುವುದು ಬೇಡ ಗುರುಗಳ ಮಾರ್ಗದರ್ಶನದಲ್ಲಿ ನಡೆದು ಅಮರನಾಗು ಕಂದ ಎಂದು ಹರಸಿದಾಗ ಈ ಮಾತು ಬಂದಿದೆ. ಇಲ್ಲಿ ಗುರು–ಶಿಷ್ಯ ಹಾಗೂ ತಾಯಿ–ಮಗನ ಸಂಬಂಧ ವಾತ್ಸಲ್ಯ ಪೂರ್ಣವಾಗಿದೆ	

31. **31. "ಮಕ್ಕಳೇ ಒಂದು ಐದು ನಿಮಿಷ ಇರಿ."**

ಉತ್ತರ :

ಈ ಮಾತನ್ನು ಗುರುರಾಜ ಕರ್ಜಗಿಯವರ 'ಕರುನಾಳು ಬಾ ಬೆಳಕೆ' ಅಂಕಣ ಬರೆಹದಿಂದ ಆರಿಸಲಾದ 'ಕಾಫೀ ಕಪ್ಪು' ಎಂಬ ಗದ್ಯ ಪಾಠದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ಹೆಡ್‌ಮಾಸ್ತರರು ಹಳೆಯ ವಿದ್ಯಾರ್ಥಿಗಳಿಗೆ ಹೇಳುತ್ತಾರೆ. ಹೆಡ್‌ಮಾಸ್ತರರ ಮನೆಗೆ ಬಂದ ಹಳೆಯ ವಿದ್ಯಾರ್ಥಿಗಳನ್ನು ಅಲ್ಲಲ್ಲಿ ಕೂರಿಸಿ ಮಾತನಾಡುತ್ತಿದ್ದರು. ಆಗ ಆ ಹಿರಿಯ ವಿದ್ಯಾರ್ಥಿಗಳು ತಮ್ಮ ತಮ್ಮ ಜೀವನದ ಬಗ್ಗೆ ಹೇಳಿಕೊಳ್ಳುತ್ತಿರುವಾಗ ಹೆಡ್‌ಮಾಸ್ತರರು "ಮಕ್ಕಳೇ ಒಂದು ಐದು ನಿಮಿಷ ಇರಿ. ನಿಮಗೆಲ್ಲಾ ಒಳ್ಳೆಯ ಕಾಫೀ ಮಾಡಿ ಕೊಂಡು ಬರುತ್ತೇನೆ. ನನ್ನ ಹೆಂಡತಿ ಹೋಗಿ ಕೆಲವರ್ಷವಾಯಿತು. ಆದರೆ ನನ್ನ ಕಾಫೀ ಕೂಡ ತುಂಬಾ ಚೆನ್ನಾಗಿರುತ್ತದೆ" ಎಂದು ಜೋರಾಗಿ ನಗುತ್ತಾ ಅಡುಗೆ ಮನೆಗೆ ಹೋದರು. ಇಲ್ಲಿ ಗುರು–ಶಿಷ್ಯರ ನಡುವಿನ ಅವಿನಾಭಾವ ಸಂಬಂಧ ಸ್ವಾರಸ್ಯಕರವಾಗಿ ಅಭಿವ್ಯಕ್ತವಾಗಿದೆ.

32. **32. "ಶಾಂತಿಯಲಿ ಬದುಕಿ ನೀ ಕರ್ತವ್ಯವನು ಮುಗಿಸು"**

ಉತ್ತರ :

ಈ ವಾಕ್ಯವನ್ನು ಸಿ, ಪಿ, ಕೆ ಬರೆದಿರುವ 'ಬೊಗಸೆ'ಎಂಬ ಕವನ ಸಂಕಲನದಿಂದ ಆಯ್ದ 'ಸದ್ದು ಮಾಡದಿರು ಎಂಬ ಪದ್ಯದಿಂದ ಆರಿಸಲಾಗಿದೆ.

ಪ್ರೀತಿಯಿಂದ ನಮ್ಮ ಕರ್ತವ್ಯವನ್ನು ಮಾಡಬೇಕು. ಎಂದು ಕವಿ ಸಿ,ಪಿ,ಕೆಯವರು ಹಲವು ನಿದರ್ಶನಗಳ ಮೂಲಕ ಹೇಳಿದ್ದಾರೆ. ತಟ್ಟೆಯೊಳು ಇರುವ ಕರ್ಪೂರ ಮೌನವಾಗಿ ಕರಗಿ, ಬೆಳಕನ್ನು ನೀಡಿ ತನ್ನ ಅವಶೇಷಗಳೇ ಇಲ್ಲದೆ ಮರೆಯಾಗುವಂತೆ ನಾವು ನಮ್ಮ ಕರ್ತವ್ಯವನ್ನು ಮಾಡಿ ಮುಗಿಸಬೇಕು. ದೀಪದ ಬೆಳಕು ಕಂಡ ತಕ್ಷಣ ಕತ್ತಲೆ ಮರೆಯಾಗುವಂತೆ ಶಾಂತಿಯಿಂದ ಸಹನೆಯಿಂದ ಬದುಕಬೇಕು ಎಂದು ಹೇಳುವಾಗ ಈ ಮಾತು ಬಂದಿದೆ. ಮೌನ ಶಾಂತಿ ಸಮಾಧಾನದ ಪ್ರತೀಕ. ಎನ್ನುವ ಸ್ವಾರಸ್ಯ ಇಲ್ಲಿ ಅಭಿವ್ಯಕ್ತವಾಗಿದೆ.

33. **33. "ಶಿವ ಶಿವ ಕಾದಿಗೆಲಿದೆವು."**

ಉತ್ತರ :

ಈ ವಾಕ್ಯವನ್ನು ಕುಮಾರವ್ಯಾಸ ಬರೆದಿರುವ 'ಕರ್ನಾಟ ಭಾರತ ಕಥಾಮಂಜರಿ' ಎಂಬ ಕವನ ಸಂಕಲನದಿಂದ ಆಯ್ದ 'ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ.' ಎಂಬ ಪದ್ಯದಿಂದ ಆರಿಸಲಾಗಿದೆ.

ಆ ಮಾತನ್ನು ಉತ್ತರಕುಮಾರ ಹೇಳುತ್ತಾನೆ. ಕೌರವರು ವಿರಾಟರಾಜನ ಗೋವುಗಳನ್ನು ಅಪಹರಿಸುತ್ತಾರೆ. ಆಗ ವಿರಾಟರಾಜನ ಮಗ ಉತ್ತರಕುಮಾರನು ರಣರಂಗಕ್ಕೆ ಅರ್ಜುನನ ಸಾರಥ್ಯದಲ್ಲಿ ಬರುತ್ತಾನೆ. ಕಣ್ಣು ಹಾಯಿಸಿದಷ್ಟು ಕೊನೆ ಕಾಣದ ಕೌರವನ ಸೇನೆಯನ್ನು ನೋಡಿ ಹೆದರಿ ಈ ಸೇನೆಯೊಡನೆ ಹೋರಾಡಿ ಗೆಲ್ಲಲ್ಲು ನನ್ನಿಂದ ಸಾಧ್ಯವಿಲ್ಲ ಎಂದನು. ಸಮುದ್ರದಂತೆ ವಿಶಾಲವಾಗಿರುವ ಸೈನ್ಯದೊಡನೆ ಶಿವನಿಂದ ಮಾತ್ರ ಯುದ್ಧ ಮಾಡಲು ಸಾಧ್ಯವೆಂದು ಕೌರವನ ಸೇನೆಗೆ ನಮೋ ಎಂದನು. ಇಲ್ಲಿ ಉತ್ತರ ಕುಮಾರನ ಭಯ ಮತ್ತು ಹೇಡಿತನದ ಪ್ರಸಂಗ ಸ್ವಾರಸ್ಯವಾಗಿ ಅಭಿವ್ಯಕ್ತವಾಗಿದೆ

IX **ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯುವುದು:** 1x4=4

(ತಪ್ಪಿಲ್ಲದೆ ಬರೆದ ಪೂರ್ಣ ಸಾಲುಗಳಿಗೆ ಒಟ್ಟಾರೆ ನಾಲ್ಕು ಅಂಕಗಳು)

34. **34. ಕೆಸರೊಳಿದ್ದರು** _____

_____

_____

_____ **ಸಾರ್ಥಕತೆಗೆ**

ಅಥವಾ

ಒಂದು ಬಾಣಕೆ _____

_____

_____

_____**ಹಗಲಿರುಳು.**

	ಉತ್ತರ ಃ ಕೆಸರೊಳಿದ್ದರು ಮೇಲೆ ಬಾಂದವಳ ನೋಡಿ ಮಿಸುಪ ರವಿಕಿರಣಗಳ ಸಿರಿಗೆ ಮೆರೆದಾಡಿ ಮಸಗುವಂಬುಜದಂತೆ ಧ್ಯೇಯದಾಳ್ವೆಸಕೆ ಬಸಮಾಗು, ಬಂದ ಮನುಜತೆಯ ಸಾರ್ಥಕತೆಗೆ. ಅಥವಾ ಒಂದು ಬಾಣಕೆ ಗುರಿಯು ಹಲವಿರುವುದುಂಟೆ? ಒಂದು ದೇಹದೊಳಾತ್ಮವೆರಡಿರುವುದುಂಟೆ? ಒಂದು ಜೀವನಕೇಕೆ ಹಲವು ಸಾಧ್ಯಗಳು? ಒಂದೇ ಹೆಗ್ಗುರಿಗೆ ಹೋರಾಡು ಹಗಲಿರುಳು.	
X 35.	**ಎಂಟು ಹತ್ತು ವಾಕ್ಯದಲ್ಲಿ ಉತ್ತರಿಸುವುದು:** ವಿಷಯಾಂಶಕ್ಕೆ ಭಾಷಾಶೈಲಿ, ಪದ ಬಳಕೆಗೆ ಒಟ್ಟು **35. ಸಿದ್ಧಾರ್ಥ ಬುದ್ಧನಾದ ಪರಿ ಹೇಗೆ ಎನ್ನುವ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ** **ಅಥವಾ** **ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಪ್ರಕೃತಿ ಕವಿಗೆ ಹೇಗೆ ಕಂಡುಬಂದಿತು ಎಂಬುದನ್ನು ನಿಮ್ಮ ಮೆಚ್ಚುವಅಂಶಗಳೊಂದಿಗೆ ವಿವರಿಸಿ.** **ಉತ್ತರ ಃ** ಬದುಕಿನಲ್ಲಿ ಸತ್ಯವನ್ನು ಕಾಣಲು ಸಿದ್ಧಾರ್ಥನು ಮಡದಿ, ಮಗು, ಅರಮನೆಯನ್ನು ತೊರೆದನು. ಕಾಡು ಕಾಡು ಅಲೆದು ಬೋಧಿವೃಕ್ಷದ ಕೆಳಗೆ ತಪಸ್ಸನ್ನು ಆಚರಿಸಿದನು. ಆಗ ಸಿದ್ಧಾರ್ಥನಿಗೆ ಜ್ಞಾನೋದಯವಾಯಿತು. ಈ ಸಂದರ್ಭದಲ್ಲಿ ಪ್ರಕೃತಿಯಲ್ಲಿ ದಯೆ, ಪ್ರೀತಿ, ಕರುಣೆ ಮಡುಗಟ್ಟಿ ನಿಂತಂತೆ ಬಾಸವಾಗುತ್ತದೆ. ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಾಣಿಸುತು. ಮರವನ್ನು ಆಶ್ರಯಿಸಿ ನಿಂತ ಬಳ್ಳಿ ಹೂವು ಬಿಟ್ಟು ನಗುವಂತೆ ಕಂಡಿತು. ಹಕ್ಕಿ ಮಮತೆಯಿಂದ ತನ್ನ ಮರಿಗೆ ಗುಟುಕು ನೀಡಿತು. ಹುತ್ತಿನಿಂದ ಇರುವೆಗಳು ಸಾಲು ಸಾಲಾಗಿ ನಡೆದವು. ಬೆಳ್ಳಕ್ಕಿಗಳ ಹಿಂಡು ಆಕಾಶಕ್ಕೆ ಏಣಿ ಹಾಕುವಂತೆ ಹಾರಾಡುತ್ತಿದ್ದವು. ಇವೆಲ್ಲದರಿಂದ ಕಾಡಿನ ತುಂಬ ಪ್ರೀತಿಯ ಹೊಳೆಯು ಕೋಡಿಯಂತೆ ಹರಿಯುತ್ತದೆ. ಹಕ್ಕಿಗಳ ಗೂಡಿನಿಂದ ಹೊಸರಾಗ ಕೇಳಿ ಬರುತ್ತದೆ. ಮಕರಂದವನ್ನು ಸವಿಯಲಿಕ್ಕೆ ದುಂಬಿಗಳು ಹೂವಿನಿಂದ ಹೂವಿಗೆ ಹಾರಾಡುತ್ತವೆ. ಗಿಡಮರಗಳು ಒಂದಕ್ಕೊಂದು ಅಪ್ಪಿಕೊಂಡು ಕುಣಿಯುವಂತೆ ಕಾಣುತ್ತದೆ. ಆಗ ಸಿದ್ಧಾರ್ಥ ಜನರ ಪ್ರೀತಿಯನ್ನು ಹುಡುಕಿಕೊಂಡು ನಾಡಿನತ್ತ ಬರುತ್ತಾನೆ. ತಪಸ್ಸಿಗಿಂತ ಜನರ ಜೀವ ಪ್ರೀತಿ ದೊಡ್ಡದೆಂದು ತಿಳಿಯುತ್ತಾನೆ. ಬದುಕಿನ ಗೂಡಾರ್ಥವನ್ನು ಅರಿತು ಬುದ್ಧನಾಗುತ್ತಾನೆ. ಅಥವಾ **ಉತ್ತರಃ** ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕೋಗಿಲೆಯ ಇಂಪಾದ ಹಾಡೊಂದು ದೂರದಿಂದ ಕೇಳಿಸುತ್ತದೆ. ಬಾನಿನಲ್ಲಿ ಬೆಳ್ಳಿಚುಕ್ಕಿ ಮೂಡುತ್ತದೆ. ಬೋಧಿವೃಕ್ಷದಲ್ಲಿ ಮಹಾ ಬೆಳಕೊಂದು ಬೆಳಗುತ್ತದೆ. ಮರವನ್ನು ಆಶ್ರಯಿಸಿದ ಬಳ್ಳಿಗಳು ಹೂವು ಬಿಟ್ಟು ನಗುವಂತೆ ಕಾಣುತ್ತಿದ್ದವು. ಮರದಲ್ಲಿ ಕುಳಿತ ಹಕ್ಕಿಗಳು ತಮ್ಮ ಮರಿಗೆ ಗುಟುಕು ಕೊಟ್ಟು ಹಾರಿದವು. ಇರುವೆಗಳು ಹುತ್ತಿನಿಂದ ಸಾಲು ಸಾಲಾಗಿ ನಡೆಯುತ್ತಿದ್ದವು. ಬೆಳಕ್ಕಿಗಳು ಗುಂಪುಗಟ್ಟಿ ಬಾನಿಗೆ ಏಣಿ ಹಾಕಿದಂತೆ ಹಾರುತ್ತಿದ್ದವು. ಕಾಡಿನ ತುಂಬ ಪ್ರೀತಿಯ ಹೊಳೆಯು ಕೋಡಿಯಂತೆ ಹರಿಯುತ್ತಿತ್ತು. ಹಕ್ಕಿಯ ಗೂಡಿನಿಂದ ಹೊಸರಾಗ ಕೇಳಿ ಬಂದಿತು. ಮಕರಂದವನ್ನು ಸವಿಯಲಿಕ್ಕೆ ದುಂಬಿಗಳು ಹೂವಿನಿಂದ ಹೂವಿಗೆ ಹಾರಾಡುತ್ತಿರುತ್ತವೆ. ಗಿಡ ಮರಗಳು ಒಂದನೊಂದು ಆಲಂಗಿಸಿಕೊಂಡು ಕುಣಿಯುವಂತೆ ಪ್ರಕೃತಿಯಲ್ಲಿ ಉತ್ಸಾಹ, ಪ್ರೀತಿ ಎದ್ದು ಕಾಣುತ್ತಿತ್ತು. ಆಗ ಸಿದ್ಧಾರ್ಥ ಜನರ ಪ್ರೀತಿಯನ್ನು ಹುಡುಕಿಕೊಂಡು ನಾಡಿನತ್ತ ಬರುತ್ತಾನೆ. ತಪಸ್ಸಿಗಿಂತ ಜನರ ಜೀವ ಪ್ರೀತಿ ದೊಡ್ಡದೆಂದು ತಿಳಿಯುತ್ತಾನೆ. ಎಂದು ಕವಿ ವರ್ಣಿಸಿದ್ದಾರೆ.	1x4=4 3 ಅಂಕಗಳು 1 ಅಂಕ 4 ಅಂಕಗಳು

XI	**ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು: (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** 36 ಪ್ರಶ್ನೆಗಳು **ಅ) ಯಕ್ಷಗಾನದಲ್ಲಿ ಕಂಡು ಬರುವ ವೀರರಸ ಪ್ರಧಾನ ಮತ್ತು ರಸಪ್ರಧಾನ ಕಾಳಗಗಳಾವುವು?** ರಾಮಾಯಣ ಮಹಾಭಾರತ ಮತ್ತು ಭಾಗವತದ ಪ್ರಸಂಗಗಳನ್ನು ಆಡಲಾಗುತ್ತದೆ. ಸಾಮಾನ್ಯವಾಗಿ ಕಾಳಗ, ಸಂಹಾರ ಮತ್ತು ಕಲ್ಯಾಣಗಳಿಗೆ ಸಂಬಂಧಪಟ್ಟ ಪ್ರಸಂಗಗಳೇ ಹೆಚ್ಚು. ಕಾಳಗವಿಲ್ಲದ ಯಕ್ಷಗಾನವಾಗಲೀ, ಬಯಲಾಟವಾಗಲೀ ಇಲ್ಲ. ಯಕ್ಷಗಾನದಲ್ಲಿ ಕೃಷ್ಣಾರ್ಜುನ ಕಾಳಗ, ಕರ್ಣಾರ್ಜುನ ಕಾಳಗ, ಬಭ್ರುವಾಹನ ಕಾಳಗ ಸುಧನ್ವಾರ್ಜುನ ಕಾಳಗ ಮೊದಲಾದವು ವೀರರಸ ಪ್ರಧಾನವಾದವುಗಳು. ಚಂದ್ರಾವಳಿ ವಿಲಾಸ, ರತಿಕಲ್ಯಾಣ, ರತ್ನಾವತಿ ಕಲ್ಯಾಣ, ಮೊದಲಾದವುಗಳು ರಸ ಪ್ರಧಾನ ಪ್ರಸಂಗಗಳು. ಇವಲ್ಲದೆ ಪ್ರಸಿದ್ಧ ಕ್ಷೇತ್ರಗಳ ಕ್ಷೇತ್ರಮಹಾತ್ಮೆಗಳಿವೆ. **ಆ) ಯಕ್ಷಗಾನಕ್ಕೆ ಬಯಲಾಟ, ಭಾಗವತರಾಟ ಎಂಬ ಹೆಸರುಗಳು ಹೇಗೆ ಬಂದಿವೆ?** ಯಕ್ಷಗಾನ ನೃತ್ಯಪ್ರಧಾನ ಕಲೆ. ಪ್ರಾರಂಭದಲ್ಲಿ ದೇಶೀ ಕಲೆಯಾಗಿದ್ದು ಅನಂತರ ಶಾಸ್ತ್ರದ ಚೌಕಟ್ಟಿಗೆ ಒಳಪಟ್ಟಿದೆ. ಇದು ಪ್ರೇಕ್ಷಕರನ್ನು ಮಂತ್ರ ಮುಗ್ಧರನ್ನಾಗಿಸುವ ಅಪೂರ್ವ ಶಕ್ತಿಯುಳ್ಳ ಕಲೆ. ಯಕ್ಷಗಾನದಲ್ಲಿ ಪ್ರಾದೇಶಿಕ ಪ್ರಭೇದಗಳಿವೆ. ಅದರಲ್ಲಿ ಮುಖ್ಯವಾದ ಮೂರು ಶೈಲಿಗಳು ತೆಂಕುತಿಟ್ಟು, ಬಡಗುತಿಟ್ಟು ಮತ್ತು ಬಡಬಡಗುತಿಟ್ಟು. ಯಕ್ಷಗಾನಕ್ಕೆ ದಶಾವತಾರ, ಬಯಲಾಟ, ಭಾಗವತರಾಟ ಎಂಬ ಹೆಸರು ಇವೆ. ಸಾಮಾನ್ಯವಾಗಿ ಬಯಲಾಟ ಪ್ರದರ್ಶಿತವಾಗುವುದು ಹಳ್ಳಿಯ ಬಯಲಿನಲ್ಲಿ. ಆದ್ದರಿಂದ ಬಯಲಾಟ, ಯಕ್ಷಗಾನ ಕಲಿಸುವವನೇ ಭಾಗವತನಾದ್ದರಿಂದ ಭಾಗವತರಾಟ ಎಂಬ ಹೆಸರು ಬಂದಿದೆ.	1x4=4 (2+2)
XII	ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ) ಪೀಠಿಕೆ / ಪ್ರಸ್ತಾವನೆ ವಿಷಯ ನಿರೂಪಣೆ ಭಾಷೆಶೈಲಿಗೆ, ಮುಕ್ತಾಯ / ಉಪಸಂಹಾರ 37. 'ಪರಿಸರ ಸಂರಕ್ಷಣೆಯಲ್ಲಿ ನಮ್ಮೆಲ್ಲರ ಪಾತ್ರ' ಅಥವಾ 'ಮೂಢನಂಬಿಕೆಗಳು'	1x4=4 1 ಅಂಕ 2 ಅಂಕಗಳು 1 ಅಂಕ 4 ಅಂಕಗಳು
XIII	**ಪತ್ರ ಲೇಖನ ಬರೆಯುವುದು: (ಯಾವುದಾದರೂ ಒಂದಕ್ಕೆ ಮಾತ್ರ)** 38. ನಿಮ್ಮನ್ನು ಯಾದಗಿರಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಮೋಹನ' ಎಂದು ಭಾವಿಸಿಕೊಂಡು ನಿನ್ನ ವರ್ಗಾವಣೆ ಪ್ರಮಾಣ ಪತ್ರವನ್ನು ಕೋರಿ ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೆ ಮನವಿ ಪತ್ರ ಬರೆಯರಿ. ಅಥವಾ ನಿಮ್ಮನ್ನು ರಾಯಚೂರು ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಭಾರ್ಗವ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ ಸ್ವಾಮಿ ವಿವೇಕಾನಂದ ಜಯಂತಿಯ ಕುರಿತು ಮೈಸೂರಿನ ಜಯಚಾಮರಾಜ ಬಡಾವಣೆಯಲ್ಲಿ ವಾಸವಾಗಿರುವ 'ಶರಣಕುಮಾರ' ಎಂಬ ಗೆಳೆಯನಿಗೆ ಪತ್ರವನ್ನು ಬರೆಯಿರಿ. **ವ್ಯಾವಹಾರಿಕ ಪತ್ರ :** ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ ಪತ್ರದ ಒಡಲು ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ ವಿನ್ಯಾಸ, ಪದಬಳಕೆ, ಶೈಲಿ ಒಟ್ಟು ಅಥವಾ **ವೈಯಕ್ತಿಕ ಪತ್ರ :** ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ ಪತ್ರದ ಒಡಲು ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ ವಿನ್ಯಾಸ, ಪದಬಳಕೆ, ಶೈಲಿ ಒಟ್ಟು	1x5=5 1 ಅಂಕ 2 ಅಂಕಗಳು 1 ಅಂಕ 1 ಅಂಕ 5 ಅಂಕಗಳು 1 ಅಂಕ 2 ಅಂಕಗಳು 1 ಅಂಕ 1 ಅಂಕ 5 ಅಂಕಗಳು